**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5006/2025 ಫ್ರಾಸಾ-7
ಚಾಸಾ-8

ದಿನಾಂಕಃ 11-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗುರುನಾಥ |
| **ತಂದೆಯ / ಗಂಡನ ಹೆಸರು** | ಬಂಗಲಾನಾಯಕ್ |
| **ವಯಸ್ಸು** | 59 ವರ್ಷ |
| **ಉದ್ಯೋಗ** | PSI ಬಡವನಹಳ್ಳಿ |
| **ವಾಸಸ್ಥಳ** | ಬಡವನಹಳ್ಳಿ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ನಾನು ದಿನಾಂಕ 30.04.2020 ರಿಂದ 08.04.2025 ರವರೆಗೆ PSI ಆಗಿ ಪಾವಗಡ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 23.07.2023 ರಂದು ಮಧ್ಯಾಹ್ನ 12.30 ಕ್ಕೆ ಚಾಸಾ 1 ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಪ್ರಕರಣವನುನ ಠಾಣಾ ಮೊಕದ್ದಮೆ ಸಂಖ್ಯೆ175/2023 ರಲ್ಲಿ ಪ್ರಕರಣ ದಾಖಲು ಮಾಡಿ, ಪ.ವ.ವ ಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಪಿ-1 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಪ್ರ.ವ.ವ. ಅನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ದಾಖಲೆಯನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಂಜೆ ಕೃತ್ಯ ನಡೆದ ಸ್ಥಳವಾದ ಹೊನ್ನಸಮುದ್ರದ ಪೆಟ್ಟಿಗೆ ಅಂಗಡಿ ಸುಟ್ಟಿರುವ ಜಾಗಕ್ಕೆ ಭೇಟಿ ನೀಡಿ ಸಂಜೆ 4 – 5 ರವರೆಗೆ ಚಾಸಾ.4 ಮತ್ತು 5 ರ ಸಮಕ್ಷಮ ನಿಪಿ 2

ರಂತೆ ಪಂಚನಾಮೆ ಮಾಡಿ ಪಂಚರ ಸಮಕ್ಷಮ ಕಬ್ಬಿಣದ ಬೀಗ ಸಮೇತ ಚಿಲಕವನ್ನು ಅಮಾನತು ಪಡಿಸಿಕೊಂಡು ಪಂಚರ ಸಹಿ ತೆಗೆದುಕೊಂಡಿರುತ್ತೇನೆ. ನಿಪಿ-2 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಅಮಾನತು ಪಡಿಸಿಕೊಂಡ ವಸ್ತುವನ್ನು ಮಾಲು ಪಟ್ಟಿ ಸಂಖ್ಯೆ 140/2023 ರಲ್ಲಿ ಅಳವಡಿಸಿಕೊಂಡು ಮಾನ್ಯ ನ್ಯಾಯಾಲಯದ ಪರವಾನಗಿ ಪಡೆದಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿನ ಚಾಸಾ.1 ರವರ ಮರು ಹೇಳಿಕೆ, ಚಾಸಾ 2 ರಿಂದ 4 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ 3 ಮತ್ತು 4 ನನ್ನ ಮುಂದೆ ನಿಪಿ.4 ಮತು 3 ರಂತೆ ಹೇಳಿಕೆ ಕೊಟ್ಟಿರುತ್ತಾರೆ. ನಿಪಿ-4 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-3 ರ ಮೇಲೆ ನನ್ನ ಸಹಿ ಇದೆ ಅದನ್ನು ಗುರುತಿಸುತ್ತೇನೆ ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ದಿನಾಂಕ 24.07.2023 ರಂದು ಆರೋಪಿ ಪತ್ತೆಗೆ ನೇಮಿಸಿದ ಸಿಬ್ಬಂದಿ ದೀಪಕ್ ಕುಮಾರ್ ರವರು ಬೆಳಿಗ್ಗೆ 10.00 ಗಂಟೆಗೆ 2 ನೇ ಆರೋಪಿಯನ್ನು ಠಾಣೆಗೆ ಕರೆತಂದು ಹಾಜರುಪಡಿಸಿದ್ದು, 12.15 ಗಂಟೆಗೆ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ನಂತರ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದುಕೊಂಡಿರುತ್ತೇನೆ. ಆರೋಪಿಯನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 19.08.2023 ರಂದು 1 ನೇ ಆರೋಪಿ ನಿರೀಕ್ಷಣಾ ಜಾಮೀನು ಪಡೆದುಕೊಂಡು ಠಾಣೆಗೆ ಹಾಜರಾಗಿದ್ದು, ವಿಚಾರಣೆ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿನಾಂಕ 11.09.2023 ರಂದು ಈ ಪಕ್ರಣದಲ್ಲಿ ಸಾಕ್ಷಿದಾರರಾದ ಚಾಸಾ 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ.

ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಆರೋಪ ದೃಢಪಟ್ಟಿದ್ದರಿಂದ ಆರೋಪಿತರ ವಿರುದ್ಧ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ

ಸಾಕ್ಷಿಯು 1 ಮತ್ತು 2 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಶ್ರೀ. SCG ವಕೀಲರಿಂದ ಆರೋಪಿ ಪರವಾಗಿಃ-**

ಪಿರ್ಯಾದಿ ಸ್ವೀಕರಿಸುವ ಮೊದಲು ಪೆಟ್ಟಿಗೆ ಅಂಗಡಿ ಸುಟ್ಟಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ನಾನು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತೇನೆ. ಆರೋಪಿತರ ಹೊಟೆಲ್ ಗೂ ಮತ್ತು ಕೋಟೆ ಗೋರಜ್ಜಿಯ ಛತ್ರದ ಮಧ್ಯೆ 5 ಅಡಿ ಅಂತರವಿದೆ ಎಂದರೆ ನಿಜ. ಸದರಿ ಟಾರ್ ರಸ್ತೆ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಹೋಗುವ ದಾರಿ ಎಂದರೆ ಸರಿ. ಹೊಟೆಲ್ ಮತ್ತು ಛತ್ರ ರಸ್ತೆಗೆ ಹೊಂದಿಕೊಂಡಂತೆ ಇವೆ ಎಂದರೆ ಸರಿ. ಸುಟ್ಟು ಹೋಗಿರುವ ಪೆಟ್ಟಿಗೆ ಅಂಗಡಿ 8 ಅಡಿ ಎತ್ತರ, 6 ಅಡಿ ಅಗಲ ಇತ್ತು. ಪೆಟ್ಟಿಗೆ ಅಂಗಡಿಯನ್ನು ಹೊಟೆಲ್ ಪಕ್ಕದಲ್ಲಿ ಇಡಲು ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ದೇವಸ್ಥಾನದ ದಾರಿ ಇರುವುದರಿಂದ ಅಂಗಡಿಯನ್ನು ಇಡಲು ಬರುವುದಿಲ್ಲ ಎಂದರೆ ರಸ್ತೆಯ ಪಕ್ಕದಲ್ಲಿ ಇಟ್ಟಿದ್ದಾರೆ. 5 ಅಡಿ ಜಾಗ ಇರುವುದರಿಂದ ಪೆಟ್ಟಿಗೆ ಅಂಗಡಿ ಇಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಪೆಟ್ಟಿಗೆ ಅಂಗಡಿ ಯಾರಿಂದ ಖರೀದಿ ಮಾಡಿರುತ್ತಾರೆಂದು ನನಗೆ ಮಾಹಿತಿ ಇಲ್ಲ. ಸದರಿ ಪೆಟ್ಟಿಗೆ ಅಂಗಡಿ ಹಳೆಯದಾಗಿರುತ್ತದೆ. ಸದರಿ ಪೆಟ್ಟಿಗೆ ಅಂಗಡಿ ಹಳೆದಾಗಿದ್ದರಿಂದ ಹೊಟೆಲ್ ಗೆ ಉರುವಲಿಗಾಗಿ ರಮಾದೇವಿ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿಯನ್ನು ಮುರಿದು ಒಂದು ಕಡೆ ಆರೋಪಿತರು ಜೋಡಿಸಿಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿಗೂ ಮತ್ತು ಫಿರ್ಯಾದಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿ ಸುಟ್ಟು ಹೋಗಿ ಬಹಳ ದಿನಗಳಾಗಿತ್ತು ಎಂದರೆ ಸರಿಯಲ್ಲ. ಸದರಿ ಪೆಟ್ಟಿಗೆ ಅಂಗಡಿ ಇಟ್ಟಿರುವ ಜಾಗದ ಯಾವುದೇ ದಾಖಲೆಯನ್ನು ಸಂಗ್ರಹಿಸಿರುವುದಿಲ್ಲ ಸಾಕ್ಷಿ ಸ್ವತಹ ಹೇಳುವುದೆಂದರೆ ಫುಟ್ ಪಾತ್ ನಲ್ಲಿ ಇಟ್ಟುಕೊಂಡಿದ್ದರು.

ಚಾಸಾ.1 ಕುಡಿದು ಸುಮಾರು ಕಡೆ ಬೆಂಕಿ ಹಚ್ಚಿದ್ದ ಎಂದು ನನ್ನ ತನಿಖೆಯಲ್ಲಿ ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಚಾಸಾ 1 ರವರು ವಾಸ ಮಾಡುವ ಮನೆ ಕೂಡ ಸುಟ್ಟಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಚಾಸಾ 1 ಕುಡಿದು ಎಲ್ಲೆಂದರಲ್ಲಿ ಬೆಂಕಿ ಹಚ್ಚುತ್ತಿದ್ದ ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆದ್ದರಿಂದ ಆರೋಪಿತರು

ಚಾಸಾ.1 ರವರ ವಿರುದ್ಧ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ಚಾಸಾ 1 ಮತ್ತು ಆರೋಪಿತರ ಮಧ್ಯೆ ಜಗಳಗಳು ನಡೆಯುತ್ತಿದ್ದವು ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಪೆಟ್ಟಿಗೆ ಅಂಗಡಿಗೆ ಬೆಂಕಿ ಹಚ್ಚಿರುವುದಿಲ್ಲ, ಯಾವುದೇ ಕಾಲಕ್ಕೆ ಸುಟ್ಟಿರುವ ಪೆಟ್ಟಿಗೆ ಅಂಗಡಿಯನ್ನು ಚಾಸಾ 1 ಅದು ನಮ್ಮದು ಎಂದು ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದಲೇ ಚಾಸಾ 1 ಫರ್ಯಾದಿ ಕೊಡುವ ಮೊದಲು ಸದರಿ ಪೆಟ್ಟಿಗೆ ಅಂಗಡಿಗೆ ಬೆಂಕಿ ಹಚ್ಚಿರುವ ವಿಷಯ ತಿಳಿದು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ವಶಕ್ಕೆ ಪಡೆಯಲು ಹೋದಾಗ ಆರೋಪಿತರು ಹೊಟೆಲ್ ನಲ್ಲಿ ಇದ್ದರು ಎಂದರೆ ಸರಿಯಲ್ಲ. ಆರೋಪಿತರಿಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದುದರಿಂದ ಹೋಟೆಲ್ ನಲ್ಲಿದ್ದ ಅರೋಪಿತರನ್ನು ನಮ್ಮ ವಶಕ್ಕೆ ಪಡೆದು ಅವರ ವಿರುದ್ಧ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.2 ಪಂಚನಾಮೆಗೆ ಪೊಲೀಸ್ ಠಾಣೆಯಲ್ಲಿ ಸಾಕ್ಷಿದಾರರು ಸಹಿ ಮಾಡಿದ್ದಾರೆಂದರೆ ಸರಿಯಲ್ಲ. ನಿಪಿ 2 ಪಂಚನಾಮೆಯನ್ನು ಕೃತ್ಯ ನಡೆದ ಸ್ಥಳದಲ್ಲಿ ಬೆರಳಚ್ಚು ಮಾಡಿಸಿರುತ್ತದೆ. ನಿಪಿ 2 ಸ್ಥಳದಲ್ಲಿ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದಿದ್ದರೂ ಸುಳ್ಳು ಪ್ರಕರಣದ ದಾಖಲು ಮಾಡಿ ಸುಳ್ಳು ದೋಷಾರೋಪಣೆ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**

**ಈ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಯನ್ನು ಕಲಂ.299 Cr.P.C., ಅಡಿಯಲ್ಲಿ ಮಾಡಿದ್ದರಿಂದ ಪಾಟೀಸವಾಲು ಇರುವುದಿಲ್ಲ.**

**U/sec.299 Cr.P.C., ಅಡಿಯಲ್ಲಿ ಸಾಕ್ಷಿಯನ್ನು ಕರೆಸಿ ವಿಚಾರಣೆ ಮಾಡಲಾಯಿತು.**